## ಗೀತಾ ಸೀತಾರಾಮ್



ಸಂಗೀತ–ಸಾಹಿತ್ಯ ಎರಡರಲ್ಲೂ ತಮ್ಮ ಛಾಪು ಮೂಡಿಸಿರುವ ಮೈಸೂರಿನ ವಿದುಷಿ ಗೀತಾ ಸೀತಾರಾಮ್, ಎರಡೂ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಮೈಸೂರಿನ ಕೇಂದ್ರ ಆಹಾರ ಸಂಶೋಧನಾಲಯದಲ್ಲಿ ಗ್ರಂಥವಿಜ್ಞಾನಿಯಾಗಿ, ಮುಖ್ಯ ಗ್ರಂಥಾಧಿಕಾರಿಯಾಗಿ, ಸಂಸ್ಥೆಯ ಉಪನಿರ್ದೇಶಕಿಯಾಗಿ ಕಾರ್ಯ ನಿರ್ವಹಿಸಿ ನಿವೃತ್ತಿ ಹೊಂದಿದ್ದಾರೆ. 'ಗೀತಾಂಜಲಿ ಸ್ಕೂಲ್ ಆಫ್ ಫೈನ್ ಆರ್ಟ್ಸ್' ನಿರ್ದೇಶಕಿಯಾಗಿ 40 ವರ್ಷಗಳಿಂದ ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಶಿಷ್ಯೆಯರನ್ನು ರೂಪಿಸುತ್ತಿದ್ದಾರೆ. ಯೂರೋಪ್–ಅಮೆರಿಕದಲ್ಲಿ ಸಂಗೀತ ಕಛೇರಿ, ಕಾರ್ಯಾಗಾರಗಳನ್ನು ನಡೆಸಿದ್ದಾರೆ. ಕಥೆ, ಕಾದಂಬರಿ, ನಾಟಕ ಸೇರಿದಂತೆ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಸಾಧನೆ ಮಾಡಿರುವ ಅವರ ಕಥೆ–ಕಾದಂಬರಿಗಳು 'ಸುಧಾ'ದಲ್ಲಿ ಪ್ರಕಟಗೊಂಡಿವೆ.

ಈ ವಾರದಿಂದ 'ಸುಧಾ'ದಲ್ಲಿ ಧಾರಾವಾಹಿಯಾಗಿ ಪ್ರಕಟಗೊಳ್ಳುತ್ತಿರುವ 'ರಾಜ ಕಲಾವಿದ' – ಭಾರತದ ಅಪ್ರತಿಮ ಕಲಾವಿದ ರಾಜಾ ರವಿವರ್ಮನ ಜೀವನ–ಸಾಧನೆಯನ್ನು ಕನ್ನಡಿಗರಿಗೆ ಪರಿಚಯಿಸುವ ಪ್ರಯತ್ನದ ಗೀತಾ ಅವರ ಮಹತ್ವಾಕಾಂಕ್ಷೆಯ ಕಾದಂಬರಿ.


ಹೇಳಿದ್ದಾರೆ, ಕಳುಹಿಸುವಿರಾ?'

ಉಮಾಂಬಾಳಿಗಿಂತ ಮೊದಲು ಎಳುಮಾವಿಲ್ ಪ್ರತಿಭಟಿಸಿದ. ಅವನ ವೇದ ಪಾಠ, ಸಂಸ್ಕೃತದ ಕಲಿಕೆ ಎಲ್ಲವೂ ನಿಂತುಹೋಗುವುದಲ್ಲದೆ ಬರಿಯ ಚಿತ್ರಕಾರನಾಗಿ ಅವನೇನು ಸಾಧಿಸಬಲ್ಲ ಎಂಬುದು ಅವನ ವಾದ. ಉಮಾಂಬಾಳಿಗೂ ರವಿವರ್ಮ ಅಲ್ಲೇ ಇದ್ದು ಕಲಿಯಬಾರದೆ ಎಂಬ ಆಸೆ. ಆದರೆ ನಾನು ದೃಢವಾಗಿ ನಿರ್ಧರಿಸಿದ್ದೆ. ರವಿವರ್ಮ ಇಲ್ಲಿದ್ದರೆ 'ಕೂಪಮಂಡೂಕ' (ಬಾವಿಯಲ್ಲಿನ ಕಪ್ಪೆ) ನಾಗುತ್ತಾನೆ. ಹೊರಹೋಗಿ ಕಲಿತರೆ ದೊಡ್ಡ ಚಿತ್ರಕಾರನಾಗುವುದರಲ್ಲಿ ಸಂದೇಹವಿಲ್ಲ ಎಂದು. ಎಂತಲೇ ಅವನ ಹೆತ್ತವರನ್ನು ಒಪ್ಪಿಸಿ ತಿರುವನಂತಪುರದ ಅರಮನೆಗೆ ಕರೆದೊಯ್ದೆ.

### ರವಿವರ್ಮ

ಸೋದರಮಾವನ ಜೊತೆಗೆ ತಿರುವನಂತಪುರದ ಅರಮನೆಗೆ ಕಾಲಿಟ್ಟಾಗ ಏನೋ ಹೊಸತೊಂದನ್ನು ಕಾಣಲಿದ್ದೇನೆ ಎಂಬ ಅನುಭವ. ಎಂದೂ ಅಮ್ಮ ಅಪ್ಪಂದಿರನ್ನು ಬಿಟ್ಟು ಹೊರಬಂದವನಲ್ಲ ನಾನು. ಹೊರಡುವಾಗ ಅಮ್ಮ ನನ್ನನ್ನು ತಬ್ಬಿ ಮುದ್ದಿಟ್ಟು 'ಜಾಗ್ರತೆಯಿಂದ ಇರು ಕೊಚ್ಚ್' ಎಂದಿದ್ದಳು. ಅಪ್ಪನಿಗೇನೂ ನಾನು ಚಿತ್ರಕಲಾವಿದನಾಗುವುದು ಇಷ್ಟವಿರಲಿಲ್ಲ. ಹಾಗಾಗಿ ಅರೆಮನದಿಂದಲೇ ಆಶೀರ್ವದಿಸಿದ್ದರು. ತುಂಬಾ ಸಂತಸಪಟ್ಟವರೆಂದರೆ ನನ್ನ ಮಾವ ರಾಜರಾಜವರ್ಮ. ತಾವು ಹಾಕಿಕೊಟ್ಟ ಅಡಿಪಾಯದ ಮೇಲೆ ಸುಂದರ ಭವನವನ್ನು ನಾನು ಕಟ್ಟುವೆನೆಂಬುದು ಅವರ ಆಶಯ. ಅದನ್ನು ನಿರಾಸೆಗೊಳಿಸಬಾರದೆಂದೇ ನಾನು ನನ್ನ ಕಿಳಿಮಾನೂರಿನ ನೆನಪುಗಳನ್ನು ಹಿಂದಿಕ್ಕಿ ತಿರುವನಂತಪುರಕ್ಕೆ ಬಂದಿದ್ದೆ.

ಅರಮನೆಯ ಆವರಣದಲ್ಲಿ ಕಿಳಿಮಾನೂರಿನ ವಂಶಸ್ಥರಿಗಾಗಿಯೇ ಇದ್ದ ಮಡತ್ ಮಡಹೂಂ ಹವೇಲಿಯಲ್ಲಿ ನಮ್ಮನ್ನು ಇಳಿಸಲಾಯಿತು. ತಿರುವಾಂಕೂರಿನ ಮಹಾರಾಜರಾದ ಆಯಿಲ್ಯ ತಿರುನಾಳ್ (ಹುಟ್ಟಿದ ನಕ್ಷತ್ರವನ್ನೇ ಹೆಸರಾಗಿ ಇಟ್ಟುಕೊಳ್ಳುವುದು ಕೇರಳ ರಾಜಮನೆತನದ ಪದ್ಧತಿ). ಆಶ್ಲೇಷ ನಕ್ಷತ್ರದಲ್ಲಿ ಹುಟ್ಟಿದವರು ನಮ್ಮನ್ನು ಅರಮನೆಗೆ ಕರೆಸಿಕೊಂಡರು. ನಾನು ಅವರ ಪಾದಗಳಿಗೆ ನಮಿಸಿ ನಿಂತೆ. ಅರಮನೆಯ ಸ್ತ್ರೀಯರು ಅಂತಃಪುರದ ತೆರೆಗಳ ಹಿಂದಿನಿಂದ ನನ್ನನ್ನು ನೋಡುತ್ತಿರುವ ಅರಿವಾಯ್ತು. ಮಹಾರಾಜರು ಕೇಳಿದರು 'ಈ ಬಾಲಕ ಯಾರು?' ನನ್ನ ಮಾವ ಉತ್ತರಿಸಿದರು. 'ಇವನು ನನ್ನ ತಂಗಿಯ ಮಗ ರವಿವರ್ಮ. ತಾವು ಪರಾಮರ್ಶಿಸಲು ಕರೆತಂದಿದ್ದೇನೆ.'

'ಇರಲಿ, ಹುಡುಗ ತುಂಬಾ ಚೂಟಿಯಾಗಿ ಕಾಣುತ್ತಾನೆ. ಈ ದಿನ ವಿಶ್ರಮಿಸಿಕೊಂಡು ನಾಳೆ ಬೆಳಿಗ್ಗೆ ಬನ್ನಿ, ಮಾತನಾಡೋಣ' ಎಂದರು ಮಹಾರಾಜರು.

ಮಹಾರಾಜ ಆಯಿಲ್ಯವರ್ಮರನ್ನು ನೋಡಿದ ಮೊದಲ ನೋಟದಲ್ಲೇ ನನಗವರು ತುಂಬಾ ಆಪ್ತರೆಂದೆನಿಸಿತು. ಮರುದಿನ ಅರಮನೆಗೆ ಹೋದಾಗ ಅವರ ಮುಖ ಸ್ವಲ್ಪ ಬಾಡಿತ್ತು. ಅಳುಕುತ್ತಲೇ ಹೇಳಿದರು. 'ರಾಜರಾಜವರ್ಮರೇ, ನಿಮ್ಮ ಸೋದರಸಂಬಂಧಿಯನ್ನು ನಮ್ಮ ಅರಮನೆಯ ಹೆಣ್ಣು ಮಕ್ಕಳೊಂದಿಗೆ ಮದುವೆಯ ಪ್ರಸ್ತಾಪಕ್ಕಾಗಿ ಕರೆಸಿದ್ದೆ. ಆದರೆ ಅದು ನಡೆಯುವಂತೆ ಕಾಣುತ್ತಿಲ್ಲ. ರವಿವರ್ಮ ಶ್ಯಾಮಲ ವರ್ಣದವನಾದ್ದರಿಂದ ಹೆಂಗಸರಿಗೆ ಸ್ವಲ್ಪ ಅಸಮಾಧಾನ. ಆದರೆ ನನಗೆ ಅವನ ಕಣ್ಣುಗಳಲ್ಲಿರುವ ತೇಜಸ್ಸು, ಅವನ ಪ್ರಕಾಶಮಾನವಾದ ಆಕರ್ಷಕ ಮುಖಭಾವ ಬಹಳ ಹಿಡಿಸಿತು. ಆದರೇನು ಮಾಡಲಿ? ಅಂತಃಪುರದವರ ಮಾತು ಮೀರಲಾರೆ.'

ನನ್ನ ಸೋದರಮಾವ ತಕ್ಷಣ ಹೇಳಿದರು 'ಮಹಾಪ್ರಭು, ನಾನು ಇಲ್ಲಿ ಇವನನ್ನು ಕರೆತಂದದ್ದು ಮದುವೆಯ ಪ್ರಸ್ತಾಪಕ್ಕಾಗಿ ಅಲ್ಲ, ಈ ಬಾಲಕ ತುಂಬಾ ಪ್ರತಿಭಾವಂತ. ತಮ್ಮ ಆಶ್ರಯದಲ್ಲಿ ಅವನ ಪ್ರತಿಭೆಗೊಂದು ನೆಲೆ ಸಿಗಬಹುದೆಂದು ಆಶಿಸಿ ಕರೆತಂದೆ.'

'ಎಂತಹ ಪ್ರತಿಭೆ?'

'ಈ ವರ್ಣಚಿತ್ರಗಳನ್ನು ಸ್ವಲ್ಪ ನೋಡಿ, ಇದು ಇವನೇ ರಚಿಸಿದ್ದು' ಎನ್ನುತ್ತಾ ನಾನು ಚಿತ್ರಿಸಿದ ಮೂರು ವರ್ಣಚಿತ್ರಗಳ ಸುರುಳಿಬಿಚ್ಚಿ ತೋರಿಸಿದರು ನನ್ನ ಮಾವ.

ಮಹಾರಾಜರ ಕಣ್ಣು ಅರಳಿತು. 'ನಿಜವಾಗಿ ಇವು ಇವನು ಬರೆದದ್ದೇ? ನಂಬಲಸಾಧ್ಯವಾಗಿದೆಯಲ್ಲ!'

'ಹೌದು ಪ್ರಭು, ನಾನೇನೋ ನನಗೆ ತಿಳಿದಷ್ಟು ಚಿತ್ರ ರಚನೆಯ ಸೂಕ್ಷ್ಮಗಳನ್ನು ಹೇಳಿಕೊಟ್ಟಿದ್ದೇನೆ. ಆದರೆ ತಮ್ಮಂಥ ಕಲಾಪೋಷಕರ ಆಶ್ರಯ ಇವನಿಗೆ ದೊರೆತರೆ ಈ ವಜ್ರ ಮತ್ತಷ್ಟು ಹೊಳೆಯುವುದರಲ್ಲಿ ಸಂಶಯವಿಲ್ಲ. ಅದಕ್ಕೆ ಅವಕಾಶವುಂಟೆ ಪ್ರಭು?'

ಆಯಿಲ್ಯ ತಿರುನಾಳ್‌ರು ನಸುನಗುತ್ತಾ 'ಭೇಷಾಗಿ ಆಗಬಹುದು, ನಮ್ಮ ಅರಮನೆಯ ಆಸ್ಥಾನ ಚಿತ್ರಕಾರರಾದ ರಾಮಸ್ವಾಮಿ ನಾಯಕರಿದ್ದಾರೆ. ಅವರ ಬಳಿಯೇ ಪಾಠ ಮಾಡಿಸೋಣ, ನೀವು ನಿಶ್ಚಿಂತೆಯಾಗಿ ಹೋಗಿಬನ್ನಿ ರಾಜರಾಜವರ್ಮರೇ, ಇಂದಿನಿಂದ ಇವನು ನನ್ನ ಕುಟುಂಬಕ್ಕೆ ಸೇರಿದವನೆಂದೇ ತಿಳಿಯಿರಿ. ಇವನ ಜವಾಬ್ದಾರಿ ನನ್ನದು. ಇವನ ಕಲೆಯ ಬೆಳವಣಿಗೆಗೆ ನಾನು ನನ್ನಿಂದೇನು ಸಾಧ್ಯವೋ ಮಾಡುತ್ತೇವೆ'.

ನನಗಂತೂ ಆನಂದ ಹೇಳತೀರದಾಯಿತು. ನನ್ನನ್ನು ಅಲ್ಲೇ ಬಿಟ್ಟು, ಸೋದರಮಾವ ಕಿಳಿಮಾನೂರಿಗೆ ಹಿಂತಿರುಗಿದರು.

ತಿರುವನಂತಪುರದಲ್ಲಿ ನನ್ನ ವಾಸ್ತವ್ಯ ಚೆನ್ನಾಗಿಯೇ ಇತ್ತಾದರೂ, ನನಗೆ ಕಿಳಿಮಾನೂರಿನ ಬಾಲ್ಯದ ನೆನಪುಗಳು ಆಗಾಗ ಬಂದು ಮುತ್ತಿಕೊಳ್ಳುತ್ತಾ ನನ್ನ ರಾತ್ರಿಯ ನಿದ್ರೆಯನ್ನು ಕೆಡಿಸುತ್ತಿದ್ದವು. ನಮ್ಮ ಹವೇಲಿಯ ಸೌಂದರ್ಯ, ಹೊರಗಿನ ತೆಂಗಿನತೋಪು, ಹಸಿರು ತುಂಬಿದ ಗದ್ದೆಗಳು, ಆನೆ, ಕುದುರೆಗಳ ಲಾಯ, ನದೀತೀರ, ದೇವಿಯ ಗುಡಿ, ನನ್ನ ತಂಗಿ ಮಂಗಳಳೊಂದಿಗಿನ ಆಟಪಾಠಗಳು, ಅಮ್ಮನ ನೃತ್ಯ ತರಗತಿಗಳು, ತಂದೆಯೊಂದಿಗೆ ಸಂಸ್ಕೃತ, ವೇದಾಧ್ಯಯನ, ಅಮ್ಮನ ತಂಪು ಆಲಿಂಗನ, ಹಬೆಯಾಡುವ ಬಿಸಿ ಅಡುಗೆ ಬಡಿಸಿದ ಬಾಳೆಲೆಯೂಟ, ಮೇಲಾಗಿ ಸೋದರಮಾವನ ಮಿತಿಯಿಲ್ಲದ ಪ್ರೀತಿ, ಇವುಗಳನ್ನೆಲ್ಲಾ ನಾನು ಕಳೆದುಕೊಂಡ ಅನುಭವ. ಆದರೂ ಮಾವ ಆಗಾಗ ಹೇಳುತ್ತಿದ್ದ ಮಾತುಗಳು ನೆನಪಿಗೆ ಬರುತ್ತಿದ್ದವು.

'ಕೊಚ್ಚ್, ಒಬ್ಬ ಕಲಾಕಾರನಿಗೆ ಬದುಕಿಗಿಂತ ಅವನ ಕಲೆಯೇ ಶ್ರೇಷ್ಠ, ಅದಕ್ಕಾಗಿ ಅವನು ತನ್ನೆಲ್ಲವನ್ನು ತ್ಯಜಿಸಲು ಸಿದ್ಧನಾಗಿರಬೇಕು'. ನಿಜ. ಬದುಕಿನಲ್ಲಿ ನಾನೇದರೂ ಸಾಧಿಸಬೇಕಾದರೆ, ಈ ಎಲ್ಲಾ ನೆನಪುಗಳನ್ನು ಮೀರಿ ನಾನು ಬೆಳೆಯಬೇಕು. ಅವುಗಳನ್ನು ನನ್ನ ಬದುಕಿನ ಸೌಧಕ್ಕೆ ಅಡಿಪಾಯವಾಗಿ ಮಾತ್ರ ಮಾಡಿಕೊಳ್ಳಬೇಕು. ಹೀಗೆ ನಿರ್ಧರಿಸಿದಾಗ ನೆಮ್ಮದಿಯ ನಿದ್ರೆ ಬರುತ್ತಿತ್ತು.